ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ..... ಚಿತ್ತಾಪೂರ

C.C: 1057/2025
CW-1 PW-1

ಹೆಸರು : ವಿರೇಂದ್ರ

ತಂದೆಯ ಹೆಸರು : ಮಹಾದೇವಪ್ಪ

ವಯಸ್ಸು : 48 ವರ್ಷ

ಉದ್ಯೋಗ : ಒಕ್ಕಲುತನ

ವಾಸ ಸ್ಥಳ : ಕಂದಗೂಳ, ತಾ: ಕಾಳಗಿ.

---

ಪ್ರಮಾಣವಚನ ಭೋಧಿಸಲಾಯಿತು. ದಿಃ 09.03.2026

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ

ಚಾಸಾ-6 ಮತ್ತು ಚಾಸಾ-7ರವರ ಪರಿಚಯ ಇದೆ. ಈ ಪ್ರಕರಣದ ಆರೋಪಿತನ ಪರಿಚಯ ಇಲ್ಲ ಅವರನ್ನು ಈ ಮೊದಲು ಪೊಲೀಸರು ನನಗೆ ತೋರಿಸಿಲ್ಲ.

ಸುಮಾರು 1-2 ವರ್ಷಗಳ ಹಿಂದೆ ವೀರಭದ್ರೇಶ್ವರ ದೇವಸ್ಥಾನದ ಹುಂಡಿಯ ಕಳ್ಳತನ ಆಗಿತ್ತು. ಆದಕಾರಣ, ನಾನು ದೂರು ನೀಡಿದ್ದೆ. ನಮ್ಮ ದೇವಸ್ಥಾನದಲ್ಲಿ ಕಳ್ಳತನವಾದ ಎಲ್ಲಾ ಹಣ ನಮಗೆ ಹಿಂತಿರುಗಿ ಸಿಕ್ಕಿದೆ. ಈ ಪ್ರಕರಣಕ್ಕೆ ಮತ್ತು ಆರೋಪಿತರಿಗೆ ಏನು ಸಂಬಂಧ ಎಂದು ನನಗೆ ಮಾಹಿತಿ ಇಲ್ಲ. ಪೊಲೀಸರು ಎಂದಿಗೂ ನಮ್ಮನ್ನು ಠಾಣೆಗೆ ಕರೆಯಿಸಿ ಆರೋಪಿತರನ್ನು ತೋರಿಸಿಲ್ಲ. ನನ್ನ ಪ್ರಕಾರ ಆರೋಪಿತರಿಗೆ ಮತ್ತು ಈ ಪ್ರಕರಣಕ್ಕೆ ಯಾವುದೇ ಸಂಬಂಧ ಇಲ್ಲ. ನಾನು ಪೊಲೀಸರ ಬಳಿ ಯಾವುದೇ ಹೇಳಿಕೆ ಅಥವಾ ಮರುಹೇಳಿಕೆ ನೀಡಿಲ್ಲ.

ಸಾಕ್ಷಿಗೆ ಈಗ ಒಂದು ದೂರನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಕಾರಣ, ಸದರಿ ದೂರನ್ನು ನಿಶಾನೆ ಪಿ-1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ ಪಿ-1(ಎ) ಎಂದು ಗುರುತಿಸಲಾಯಿತು.

(ಮಾನ್ಯ ಸ ಸ ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ದಾಖಲೆಗಳನ್ನು ಪರಿಶೀಲಿಸಿ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸ.ಸ.ಅಭಿಯೋಜಕರವರಿಂದ

ನೀವು ಕಂದಗೂಳ ಗ್ರಾಮದ ವೀರಭದ್ರೇಶ್ವರ ದೇವಸ್ಥಾನದ ಕಮಿಟಿಯ ಸದಸ್ಯರು ಎಂದರೆ ಸರಿ. ದಿನಾಂಕ: 20-01-2025ರಂದು ಬೆಳಿಗ್ಗೆ 6-00 ಗಂಟೆಗೆ ದೇವಸ್ಥಾನದ ಅರ್ಚಕರಾದ ಚಾಸಾ-7ರವರು ಕರೆ ಮಾಡಿ ದಿನಾಂಕ: 19-01-2025ರ ರಾತ್ರಿಯಲ್ಲಿ ಗರ್ಭಗುಡಿಗೆ ಚಾವಿ ಹಾಕಿ ದೇವಸ್ಥಾನ ಕಂಪೌಂಡ ಮುಚ್ಚಿ ಕೊಂಡಿಹಾಕಿಕೊಂಡು ಹೋಗಿದ್ದು, ಬೆಳಿಗ್ಗೆ 5-30 ಗಂಟೆಗೆ ಪೂಜೆ ಮಾಡಲು ದೇವಸ್ಥಾನಕ್ಕೆ ಬಂದಾಗ, ದೇವಸ್ಥಾನದ ಕಂಪೌಂಡ ಗೇಟ್ ತೆರೆದು ಒಳಗಿನ ಹುಂಡಿಯನ್ನು ಕಳ್ಳತನವಾದ ಬಗ್ಗೆ ತಿಳಿಸಿದರು ಎಂದರೆ ಸರಿ. ಆದಕಾರಣ, ನೀವು ಕಮಿಟಿಯ ಸದಸ್ಯರೆಲ್ಲರೂ ಸೇರಿ ಪರಿಶೀಲನೆ ಮಾಡಿ ಹುಂಡಿಯಲ್ಲಿ ಸುಮಾರು 40 ರಿಂದ 45 ಸಾವಿರ ಹಣ ಇತ್ತು ಅದು ಕಳ್ಳತನವಾಗಿದೆ ಎಂದು ದೂರು ನೀಡಿದ್ದೀರಿ ಎಂದರೆ ಸರಿ.

ದಿನಾಂಕ: 12-06-2025ರಂದು ನಾನು -------------------------- ನಿಜವಿರುತ್ತದೆ ಎಂದು ಪುನರ ಹೇಳಿಕೆಯನ್ನು ಪೊಲೀಸರ ಬಳಿ ನೀಡಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಓದಿ ಹೇಳಿದ ಮತ್ತು ಸಾಕ್ಷಿ ಅಲ್ಲಗಳೆದ ಪುನರ ಹೇಳಿಕೆ ಭಾಗವನ್ನು ನಿಶಾನೆ ಪಿ-2 ಎಂದು ಗುರುತಿಸಲಾಯಿತು. ನಿಶಾನೆ ಪಿ-2ರಲ್ಲಿ ನಮೂದಿಸಿದಂತೆ ಪೊಲೀಸರು ನಿಮಗೆ ಆರೋಪಿತರನ್ನು ತೋರಿಸಿ ಪಂಚನಾಮೆಯನ್ನು ಜರುಗಿಸಿದರೂ ಸಹ ಈಗ ಹಣ ಹಿಂತಿರುಗಿ ಬಂದ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್.ಜಿ.ಎ.(ಎಲ್.ಎ.ಡಿ.ಸಿ.) ವಕೀಲರಿಂದ - ಏನು ಇಲ್ಲಾ</u>

ಮರು ವಿಚಾರಣೆ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು )

ಓ. ಹೇ ಕೇ.ಸರಿ ಇದೆ.

ಸಿವಿಲ್ & J.M.F.C ನ್ಯಾಯಾಧೀಶರು,

ಚಿತ್ತಾಪೂರ.